ಕರ್ನಾಟಕ ಸರ್ಕಾರ

ಪದವಿ ಪೂರ್ವ ಶಿಕ್ಷಣ ಇಲಾಖೆ

# ದ್ವಿತೀಯ ಪಿಯುಸಿ ಭೂಗೋಳಶಾಸ್ತ್ರ-24

## ಪ್ರಥಮ ಕಿರುಪರೀಕ್ಷೆ-ಸೆಪ್ಟೆಂಬರ್ -2021

ಸಮಯ : 1.30 ಗಂಟೆಗಳು | ಗರಿಷ್ಠ ಅಂಕಗಳು : 50

ಸೂಚನೆಗಳು :

1. ಎಲ್ಲಾ ಪ್ರಶ್ನೆಗಳನ್ನು ಉತ್ತರಿಸಿ.
2. ಅವಶ್ಯವಿದ್ದೆಡೆ ನಕಾಶೆ ಮತ್ತು ರೇಖಾ ಚಿತ್ರದೊಂದಿಗೆ ವಿವರಿಸಿ.

**I .ಕೆಳಗಿನ ಪ್ರಶ್ನೆಗಳಿಗೆ ಒಂದು ಪದ ಅಥವಾ ಒಂದು ವಾಕ್ಯದಲ್ಲಿ ಉತ್ತರಿಸಿ. 1X5=5**

1. ಮಾನವ ಭೂಗೋಳಶಾಸ್ತ್ರದ ಪಿತಾಮಹ ಯಾರು?
2. ಆರ್ಥಿಕ ಉದ್ಯೋಗಗಳೆಂದರೇನು?
3. ವಿಶ್ವದ ಅತಿದೊಡ್ಡ ಮೆಗಾಸಿಟಿ ಯಾವುದು?
4. 2011ರ ಜನಗಣತಿಯ ಪ್ರಕಾರ ಭಾರತದ ಒಟ್ಟು ಜನಸಂಖ್ಯೆ ಎಷ್ಟು?
5. UNDP ಯನ್ನು ವಿಸ್ತರಿಸಿ.

**II .ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ 2 ರಿಂದ 3 ವಾಕ್ಯಗಳಲ್ಲಿ ಉತ್ತರಿಸಿ. 2X5=10**

6. ವಸತಿ ಭೂಗೋಳಶಾಸ್ತ್ರದ ಯಾವುದಾದರೂ ಎರಡು ಮೂಲಾಂಶಗಳನ್ನು ತಿಳಿಸಿ.
7. ದ್ವಿತೀಯ ಮತ್ತು ತೃತೀಯ ಆರ್ಥಿಕ ವೃತ್ತಿಗಳಿಗಿರುವ ವ್ಯತ್ಯಾಸ ತಿಳಿಸಿ.
8. ಚತುರ್ಥಿಯ ಆರ್ಥಿಕ ಉದ್ಯೋಗಗಳಿಗೆ ಯಾವುದಾದರೂ ಎರಡು ಉದಾಹರಣೆ ಕೊಡಿ.
9. ಗ್ರಾಮೀಣ ಮತ್ತು ನಗರ ವಸತಿಗಳನ್ನು ಅರ್ಥೈಸಿ.
10. ಯಾವುದಾದರೂ ಎರಡು ಶೈಕ್ಷಣಿಕ ನಗರಗಳನ್ನು ಹೆಸರಿಸಿ.
11. ಭಾರತದ ಜನಸಂಖ್ಯೆಯ ಹಂಚಿಕೆಯ ಮೇಲೆ ಪ್ರಭಾವ ಬೀರುವ ಯಾವುದಾದರೂ ನಾಲ್ಕು ಅಂಶಗಳನ್ನು ತಿಳಿಸಿ.

**III .ಕೆಳಗಿನ ಯಾವುದಾದರೂ ಐದು ಪ್ರಶ್ನೆಗಳಿಗೆ 25 ರಿಂದ 30 ವಾಕ್ಯಗಳಲ್ಲಿ ಉತ್ತರಿಸಿ. 5X5=25**

12. ಮಾನವ ಭೂಗೋಳಶಾಸ್ತ್ರದ ವಿಭಾಗಗಳನ್ನು ವಿವರಿಸಿ.
13. ಬದಲಾಗುತ್ತಿರುವ ಮಾನವ ಭೂಗೋಳಶಾಸ್ತ್ರದ ಅಧ್ಯಯನ ವಿಧಾನಗಳ ಬಗ್ಗೆ ಬರೆಯಿರಿ.
14. ಪ್ರಪಂಚದಲ್ಲಿ ಪ್ರಾಣಿ ಸಾಕಾಣಿಕೆಯನ್ನು ಕುರಿತು ವಿವರಿಸಿ.
15. ಗಣಿಗಾರಿಕೆ ವಿಧಗಳು ಮತ್ತು ಅನಾನುಕೂಲತೆಗಳನ್ನು ವಿವರಿಸಿ.
16. ಗ್ರಾಮೀಣ ವಸತಿಗಳ ಆಕಾರವನ್ನು ವಿವರಿಸಿ.
17. ನಗರ ವಸತಿಗಳ ಸಮಸ್ಯೆಗಳನ್ನು ಚರ್ಚಿಸಿ.
18. ಭಾರತದ ಜನಸಂಖ್ಯಾ ಸಂಯೋಜನೆಯನ್ನು ವಿವರಿಸಿ.

**IV .ಕೆಳಗಿನ ಯಾವುದಾದರೂ ಒಂದು ಪ್ರಶ್ನೆಗೆ ಉತ್ತರಿಸಿ. 10X1=10**

19. ಭಾರತದಲ್ಲಿ ತೀವ್ರಗತಿಯ ಜನಸಂಖ್ಯಾ ಬೆಳವಣಿಗೆಯ ಕಾರಣಗಳು ಮತ್ತು ಪರಿಣಾಮಗಳನ್ನು ಕುರಿತು ಚರ್ಚಿಸಿ.
20. ವಲಸೆಯ ವಿಧಗಳನ್ನು ವಿವರಿಸಿ.

************